# ಪ್ರಾರ್ಥನೆ

## ಕುಂತಿಯ ಪ್ರಾರ್ಥನೆ

(ಭಾಗವತದಿಂದ)

ಗೋಪ್ಯಾದದೇ ತ್ವಯಿ ಕೃತಾಗಸಿ ದಾಮ ತಾವ-
ದ್ಯಾ ತೇ ದಶಾಶ್ರುಕಲಿಲಾಂಜನ ಸಂಭ್ರಮಾಕ್ಷಮ್ ।
ವಕ್ತ್ರಂ ನಿನೀಯ ಭಯಭಾವನಯಾ ಸ್ಥಿತಸ್ಯ
ಸಾ ಮಾಂ ವಿಮೋಹಯತಿ ಭೀರಪಿ ಯದ್ಬಿಭೇತಿ ॥

ನೀನು ಬಾಲ್ಯದಲ್ಲಿ ತುಂಟತನ ಮಾಡಿದಾಗ ಯಶೋದೆಯು ನಿನ್ನನ್ನು ಕಟ್ಟಿಹಾಕಲು ಕೈಯಲ್ಲಿ ಹಗ್ಗವನ್ನೆತ್ತಿಕೊಂಡಳು. ಒಡನೆಯೇ ನೀನು ಹೇಗೆ ಕಾಣಿಸಿಕೊಂಡೆ? ತುಂಬಿದ ಕಣ್ಣೀರಿನಿಂದ ಕಣ್ಣಿಗೆ ಹಾಕಿದ್ದ ಕಾಡಿಗೆ, ಕದಡಿಹೋಗುತ್ತಿರುವ ಚಂಚಲನೇತ್ರಗಳು, ತಗ್ಗಿಸಿದ ತಲೆ – ಎಂಥ ಭಯದ ಅಭಿನಯ! ಭಯಕ್ಕೂ ಭಯವನ್ನು ಉಂಟು ಮಾಡುವವನಿಗೆ ಭಯವೆತ್ತಣದು? ಆದರೆ ಆ ರಮಣೀಯ ಅಭಿನಯದ ಧ್ಯಾನ ಈಗಲೂ ನನ್ನನ್ನು ಮೋಹಗೊಳಿಸುತ್ತಿದೆ.

ಕೇಚಿದಾಹುರಜಂ ಜಾತಂ ಪುಣ್ಯಶ್ಲೋಕಸ್ಯ ಕೀರ್ತಯೇ ।
ಯದೋಃ ಪ್ರಿಯಸ್ಯಾನ್ವವಾಯೇ ಮಲಯಸ್ಯೇವ ಚಂದನಮ್॥

ನೀನು ಜನ್ಮರಹಿತ. ನೀನು ಜನ್ಮರಹಿತನಾಗಿದ್ದರೂ ಏಕೆ ಜನ್ಮ ತಾಳಿದೆ? – ಎಂದರೆ ಇದಕ್ಕೆ ಕೆಲವು ಮಹಾಪುರುಷರು, "ಮಲಯ ಪರ್ವತದ ಕೀರ್ತಿಯನ್ನು ಹರಡುವುದಕ್ಕಾಗಿ ಅಲ್ಲಿ ಗಂಧದಮರಗಳು ಹುಟ್ಟುವುದಿಲ್ಲವೆ? ಹಾಗೆಯೇ ಪುಣ್ಯಶ್ಲೋಕನೂ, ಪ್ರಿಯನಾದ ಭಕ್ತೋತ್ತಮನೂ ಆದ ಯದು ಮಹಾರಾಜನ ಕೀರ್ತಿಯನ್ನು ವಿಸ್ತರಿಸಲು ಅವನ ವಂಶದಲ್ಲಿ ಸ್ವಾಮಿಯು ಅವತಾರ ಮಾಡಿದ" ಎಂದು ಕಾರಣವನ್ನು ಹೇಳುತ್ತಾರೆ.

ಅಪರೇ ವಸುದೇವಸ್ಯ ದೇವಕ್ಯಾಂ ಯಾಚಿತೋಽಭ್ಯಗಾತ್ ।
ಅಜಸ್ತ್ವಮಸ್ಯ ಕ್ಷೇಮಾಯ ವಧಾಯ ಚ ಸುರದ್ವಿಷಾಮ್ ॥

ಮತ್ತೆ ಕೆಲವರ ಹೇಳಿಕೆಯಂತೆ ಹಿಂದಿನ ಜನ್ಮದಲ್ಲಿ ಸುತಪ ಮತ್ತು ಪೃಶ್ನೀ ಎಂಬ ರೂಪದಲ್ಲಿದ್ದ ವಸುದೇವ–ದೇವಕಿಯರ ಬೇಡಿಕೆಯಂತೆ ಜನ್ಮರಹಿತನಾದ ನೀನು ಅವರಿಗೆ ಪುತ್ರನಾಗಿ ಜನಿಸಿದೆ. ದೇವತೆಗಳ ಯಾಚನೆಯಂತೆ ಈ ಲೋಕಗಳ ಕ್ಷೇಮಕ್ಕಾಗಿಯೂ ಮತ್ತು ದೇವದ್ವೇಷಿಗಳಾದ ದೈತ್ಯರ ಸಂಹಾರಕ್ಕಾಗಿಯೂ ನೀನು ಜನ್ಮ ತಾಳಿದೆ."

ಭಾರಾವತರಣಾಯಾನ್ಯೇ ಭುವೋ ನಾವ ಇವೋದಧೌ ।
ಸೀದನ್ತ್ಯಾ ಭೂರಿಭಾರೇಣ ಜಾತೋ ಹ್ಯಾತ್ಮಭುವಾರ್ಥಿತಃ ॥

"ಭೂಮಿಯು, ಸಮುದ್ರದ ಮಧ್ಯದಲ್ಲಿ ಭಾರದಿಂದ ಮುಳುಗಿ ಹೋಗುತ್ತಿರುವ ನಾವೆಯಂತೆ ಅಧರ್ಮದ ಭಾರದಿಂದ ಕಡುಪೀಡಿತವಾಗಿದ್ದಾಗ ಬ್ರಹ್ಮದೇವರ ಪ್ರಾರ್ಥನೆಯಂತೆ ಅದರ ಭಾರವನ್ನು ಇಳುಹಲು ನೀನು ಅವತರಿಸಿದೆ" – ಎಂದು ಮತ್ತೆ ಕೆಲವರು ಸಾರುತ್ತಾರೆ.

# ಸೂಕ್ತಿಪ್ರಭ

## ಜ್ಞಾನ

**ಬು**ದ್ಧಿವಂತಿಕೆ ಎನ್ನುವುದು ಅಜ್ಞಾನದ ಇನ್ನೊಂದು ಹೆಸರಷ್ಟೆ. ಏಕೆಂದರೆ ಅದರ ಪರಿಧಿಯು ಸೀಮಿತವಾದುದು. ಆದ್ದರಿಂದ ಪೂರ್ಣಜ್ಞಾನವನ್ನು ಪಡೆಯಲಿಚ್ಛಿಸುವವನು ಮತ್ತು ಜಗತ್ತಿನ ಎಲ್ಲ ರಹಸ್ಯಗಳನ್ನು ಅರಿಯಲಿಚ್ಛಿಸುವವನು ಭಗವಂತನ ಜ್ಞಾನಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡಬೇಕು.

–ಸ್ವಾಮಿ ಬ್ರಹ್ಮಾನಂದ

**ದುಃ**ಖವೆಂದರೆ ಏನು? ನಿಜವಾದ ಜ್ಞಾನದ ಅಭಾವ. ಎಲ್ಲಿ ಜ್ಞಾನವಿರುವುದೋ ಅಲ್ಲಿ ದುಃಖವಿರುವುದಿಲ್ಲ, ಕೇವಲ ಆನಂದ ಮಾತ್ರವೇ ಇರುತ್ತದೆ. – ಸ್ವಾಮಿ ಶಿವಾನಂದ

**ಜ್ಞಾ**ನ, ಪ್ರೇಮ ಮತ್ತು ಪವಿತ್ರತೆ –ಇವು ನಮ್ಮ ಸ್ವಭಾವ ವಿಹಿತವಾದವುಗಳು. ಕೀರ್ತಿ, ಹೆಸರು ಮತ್ತು ವೈಭವಗಳು ನಮ್ಮ ಸ್ವಭಾವಕ್ಕೆ ಹೊರತಾದವುಗಳು. ಅವುಗಳ ಹಿಂದೆ ಹೋಗುವುದು ಬೇಡ. – ಸ್ವಾಮಿ ಪ್ರೇಮಾನಂದ

"**ಅ**ದ್ವೈತ ಜ್ಞಾನವನ್ನು ನಿನ್ನದಾಗಿಸಿಕೊಂಡು, ಏನು ಬೇಕಾದರೂ ಮಾಡು" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಹಾಗೆಂದರೆ, ಭಗವಂತನು ನಿನ್ನ ಆತ್ಮದ ಆತ್ಮವೆಂದು, ಪ್ರಾಣದ ಪ್ರಾಣವೆಂದು, ಕಣ್ಣಿನ ಕಣ್ಣೆಂದು ತಿಳಿದುಕೊಂಡು ಆತನನ್ನು ಪ್ರೀತಿಸು ಎಂದು. – ಸ್ವಾಮಿ ತುರೀಯಾನಂದ

**ಜ್ಞಾ**ನವನ್ನು ಗಳಿಸಿಕೊಳ್ಳುವ ಮೊದಲ ಹೆಜ್ಜೆಯೆಂದರೆ ನಾವು ಅಜ್ಞಾನಿಗಳೆಂಬುದನ್ನು ಅರಿತುಕೊಳ್ಳುವುದು. – ಸೆಸಿಲ್

**ಎ**ಲ್ಲ ಕಲಿಕೆಯ ಅಂತ್ಯವೆಂದರೆ ಭಗವಂತನ ಜ್ಞಾನ; ಆ ಜ್ಞಾನದ ಮೂಲಕ ಆತನನ್ನು ಪ್ರೀತಿಸುವುದು ಮತ್ತು ಅನುಸರಿಸುವುದು. – ಮಿಲ್ಟನ್

**ಜ್ಞಾ**ನದ ತಿಳಿವಳಿಕೆಯೆಂದರೆ ಅದನ್ನು ಅನುಭವಿಸಿ ನೋಡುವುದು. – ಚಾರ್ಲ್ಸ್ ಹೆಡ್ಜ್

**ನೀ**ವು ಜ್ಞಾನವನ್ನು ಗಳಿಸಿಕೊಂಡಿದ್ದರೆ, ಇತರರೂ ಅದರಿಂದ ತಮ್ಮ ಬಾಳನ್ನು ಬೆಳಗಿಸಿಕೊಳ್ಳಲು ಅವಕಾಶ ನೀಡಿ.

– ಫುಲ್ಲರ್

**ಯಾ**ವುದನ್ನು ನೀವು ಸಂಪೂರ್ಣ ತಿಳಿದುಕೊಂಡಿಲ್ಲವೋ, ಅದನ್ನು ನೀವು ಸಂಪೂರ್ಣವಾಗಿ ಗಳಿಸಿಕೊಂಡಿಲ್ಲ.

– ಗಯಟೆ

**ಎ**ಲ್ಲ ಬಗೆಯ ಜ್ಞಾನವೂ ನೈತಿಕಕ್ರಿಯೆಯಲ್ಲಿ ಪರ್ಯವಸಾನವಾಗಬೇಕು. – ಪಿ. ಸಿಡ್ನಿ